ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,

ದಕ್ಷಿಣ ಕನ್ನಡ, ಮಂಗಳೂರು

ಸ್ಪೆಷಲ್ ಕೇಸ್ ನಂಬ್ರ 73/2018

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕೇಶವ | ಫ್ರಾಸಾಃ 2 |
| ತಂದೆಯ ಹೆಸರು | : | ಶಿವಯ್ಯ | ಚಾಸಾಃ 2 |
| ಫ್ರಾಯ | : | 48 ವರ್ಷ | ದಿನಾಂಕಃ 20.09.2023 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಚಾಲಕ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ | |
| ವಾಸಸ್ಥಳ | : | ಮಂಗಳೂರು | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನಾನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ 2014 ರಿಂದ ವಾಹನ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಮಹಾದೇವಪ್ಪ, ಶ್ರೀಜಿತ್ (ಚಾಸಾ-1, ಚಾಸಾ-3) ಇವರ ಪರಿಚಯ ಇದೆ. ನ್ಯಾಯಾಲಯದಲ್ಲಿರುವ ಆರೋಪಿಗಳ ಪರಿಚಯ ಇದೆ.

2) 13.07.2017 ರಂದು ಬೆಳ್ತಂಗಡಿ ತಾಲೂಕಿನ ಮುಗ್ರು ಗ್ರಾಮದ ಸರ್ವೆ ನಂಬ್ರ 72/1ರ ಕಪ್ಪು ಕಲ್ಲು ಕೋರೆ ಹತ್ತಿರ ಮಹಜರ್ ಮಾಡಿರುತ್ತೇವೆ. ಅಲ್ಲಿ ಗಣಿಗಾರಿಕೆ ಮಾಡಲಾಗುತ್ತಿದೆ ಎಂದು ಮಹಜರ್ ಮಾಡಿರುತ್ತಾರೆ. ಮಹಜರನ್ನು ಜಿಯಾಲಿಜಿಸ್ಟ್ ಪದ್ಮಶ್ರೀ ತಯಾರಿಸಿರುತ್ತಾರೆ. ಈಗ ನೋಡಿದ ಮಹಜರನ್ನು (ನಿಪಿ-7)

ಅಲ್ಲಿ ತಯಾರಿಸಿದ್ದು ಇದೆ. ಅದರಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು.

3) 10.07.2017, 12.07.2017, 13.07.2017, 15.07.2017 ರಂದು ಕೋರೆಯ ಹತ್ತಿರ ಹೋಗಿದ್ದೇವೆ. 15.07.2017 ರಂದು ಪಿಸಿ-71 ಜೆಸಿಬಿಯನ್ನು ಉಪ್ಪಿನಂಗಡಿ ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ಕೊಟ್ಟಿರುತ್ತೇವೆ. ಈಗ ನೋಡಿದ ಮಹಜರನ್ನು (ನಿಪಿ-9) ಆ ಸಮಯದಲ್ಲಿ ಬರೆದಿದ್ದು ಇದೆ. ಅದರಲ್ಲಿರುವ ಸಹಿ ನನ್ನದು ಇದೆ. ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಜೆಸಿಬಿ ನ್ಯಾಯಾಲಯದಲ್ಲಿರುವ ಆರೋಪಿತರಿಗೆ ಸಂಬಂಧಪಟ್ಟಿದ್ದು ಇದೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಪಿ.ಎಸ್., ವಕೀಲರಿಂದಃ</u>

4) ಆ ದಿನ ವಶಪಡಿಸಿಕೊಂಡ ಜೆಸಿಬಿ ನೋಂದಣಿ ಸಂಖ್ಯೆ ಎಷ್ಟು ಎಂದು ನನಗೆ ಗೊತ್ತಿಲ್ಲ. ಜೆಸಿಬಿ ವಶಪಡಿಸಿಕೊಂಡ ಸ್ಥಳದ ಹತ್ತಿರ ಕಲ್ಲಿನ ಕೋರೆ ಇತ್ತು. ಜೆಸಿಬಿ ವಶಪಡಿಸಿಕೊಳ್ಳುವ ಸಮಯದಲ್ಲಿ ಅಲ್ಲಿ ಬೇರೆ ಜನರು ಸೇರಿರಲಿಲ್ಲ. ಮಹಜರ್ ಗೆ ಮಹಾದೇವಪ್ಪ, ಶ್ರೀಜಿತ್ (ಚಾಸಾ-1, ಚಾಸಾ-3) ಸಹಿ ಮಾಡಿದ್ದಾರೆ. ನಾನು ಜಿಯಾಲಜಿಸ್ಟ್ ಪದ್ಮಶ್ರೀ ಇವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದು ಹೇಳುವುದು ಸರಿಯಲ್ಲ. ನಾನು ಮಹಜರಿಗೆ ಕಲ್ಲು ಕೋರೆಯ ಹತ್ತಿರ ಸಹಿ ಮಾಡಿದ್ದೇನೆ. ನಾನು ನಮ್ಮ ಮಹಜರಿಗೆ ಕಚೇರಿಯಲ್ಲಿ ಸಹಿ ಮಾಡಿದ್ದೇನೆ ಎಂದು

ಹೇಳುವುದು ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.